ಹೆಜ್ಜೆ ಇಡುವ ರೀತಿ ನೋಡಿ ಅವಳಿಗೆ ನಗು ಬರುತ್ತಿತ್ತು. ಅವಳ ಹತ್ತಿರ ಬರುವಷ್ಟರಲ್ಲಿ ಮೂರ್ನಾಲ್ಕು ಬಾರಿ ಹುಡುಗರು ಬೆವರು ಒರೆಸಿಕೊಂಡಿದ್ದರು. 'ಉಳಿದ ರೊಕ್ಕ ಆಮೇಲೆ ಕೊಡತೀವಿ, ಪ್ರಾಮಿಸ್, ಪ್ಲೀಸ್' ಎಂದು ನಾಗು ಕೈ ಮುಂದು ಮಾಡುತ್ತ ಆಕೆಗೆ ಸಣ್ಣದನಿಯಲ್ಲಿ ಹೇಳಿದ. ದುಡ್ಡು ಕಡಿಮೆ ಇದ್ದುದನ್ನು ಆಕೆ ಒಪ್ಪುತ್ತಿದ್ದಳೇನೋ. ಆದರೆ ಇವನು ಪ್ರಾಮಿಸ್ ಎಂದು ಹೇಳಿದ ಶಬ್ದ ಹೋಟೆಲಿನಲ್ಲಿ ದೊಡ್ಡ ಕೋಲಾಹಲವನ್ನೆ ಸೃಷ್ಟಿಸಿತು. 'ಯಪ್ಪಾ, ಏಯ್ ಯಪ್ಪಾ, ನೋಡಿಲ್ಲಿ... ಈ ನಾಗಣ್ಣ ಅದಾನಲ್ಲ, ಪ್ರಾಮೀಸ್, ಗೀಮೀಸ್ ಅಂತ ಇಂವ ನನಗ ಏನೇನೋ ಹೇಳಲಿಕ್ಕೆ ಹತ್ಯಾನ...' ಸುಶೀಲಾಳ ಅಳುವ ದನಿಗೆ ಒಳಗಿದ್ದ ಅವಳ ಅಪ್ಪ ಓಡೋಡಿ ಬಂದ. ಮಂದಿ ಸಂತೆಯಂತೆ ನೆರೆದರು. ಅದು ಅಷ್ಟಕ್ಕೆ ಮುಗಿಯಲಿಲ್ಲ. ವಿಷಯ ಮಾವನಿಗೆ ಗೊತ್ತಾಗಿ, ಅವನಿಂದ ಅವ್ವನಿಗೂ ಗೊತ್ತಾಯಿತು. ಊರ ಅಗಸಿಯಲ್ಲಿ, ಬಸ್ಸಿನಲ್ಲಿ, ಕೆರೆ ದಂಡೆಯಲ್ಲಿ, ಬಾವಿಯ ಕಟ್ಟೆಯಲ್ಲಿ ಮಂದಿ ಅದನ್ನು ಮಾತಾಡಿಯೇ ಮಾತಾಡಿದರು. 'ಏನೋ ನಾಗ್ಯಾ, ಸುಶೀಲಾಗೆ ಲವ್ ಮಾಡ್ತೇನಿ ಅಂತ ಹೇಳಿದೆಂತ... ರೊಕ್ಕ ಇಲ್ಲದ ಹೋಟೆಲಿಗೆ ಹೋಗಿದ್ದೆಂತ.' ಕನಿಷ್ಠ ಒಂದು ವರ್ಷವಾದರೂ ಎಲ್ಲರೂ ಆ ಮಾತನ್ನು ಅವನಿಗೆ ಹೇಳಿರಬೇಕು. ಮುಂದೆ ಎಷ್ಟೋ ದಿನಗಳ ಕಾಲ ಆತ ಯಾವ ಹುಡುಗಿಯ ಮುಖವನ್ನೂ ನೋಡಲಿಲ್ಲ.

ಮುಂದೆ ಒಂದು ಸಲ ಹೋದಾಗ ಅವಳು ಇರಲಿಲ್ಲ. ಮದುವೆಯಾಗಿ ಹೋಗಿದ್ದಳು. ಎರಡು ವರ್ಷವಾಯಿತಂತೆ ಹೋಗಿ, ತಮಗೆ ಗೊತ್ತೇ ಆಗಲಿಲ್ಲ. ಅವಳು ಹೋದುದಕ್ಕೆ ಹೋಟೆಲಿನ ಜೀವವೇ ಹೋದವರಂತೆ ಇವನು ಮತ್ತು ಸ್ನೇಹಿತರು ಮರುಗಿದರು. ಆಮೇಲೆ ನಾಗರಾಜ ಅವಳನ್ನು ಮರೆತೇಬಿಟ್ಟಿದ್ದ. ಒಂದು ದಿನ ಗೆಳೆಯನೊಬ್ಬ ಏನೋ ಗುಪ್ತ ವಿಷಯ ಹೇಳುತ್ತೇನೆಂದು ಗುಡ್ಡದ ಕಡೆ ಕರೆದುಕೊಂಡು ಹೋದ. ಸುಶೀಲಾ ಗಂಡನ ಜೊತೆ ಜಗಳಾಡಿ ತವರಿಗೆ ಮರಳಿದ್ದಾಳೆಂದು ವಿವರಿಸಿದ. ತನಗೆ ಅದು ಕೆಡುಕೆನಿಸಿತು. ಮಾತನಾಡಿಸಿ ಬರಬೇಕೆಂದು ಮಾಡಿದ್ದೆ. ಆದರೆ ಅಷ್ಟು ದಿನ ಹೋಗದಿದ್ದವನು ಆಕೆ ಬಂದಿದ್ದಾಳೆಂದು ಹೋದನೆಂದು ಮಂದಿ ಊಹಿಸಿಕೊಂಡರೆ? ಅಲ್ಲದೆ ಹೋಗಿ ಏನು ಕೇಳುವುದು? ಅವಳ ದುಃಖ ಮತ್ತಷ್ಟು ಹೆಚ್ಚಾದೀತು. ಅವನು ಸುಮ್ಮನಾದ. ಮತ್ತೊಂದು ಸಲ ಅವಳ ಬಗ್ಗೆ ಆತ ಕೇಳುವಂತಾಯಿತು. ಗೆಳೆಯನೊಬ್ಬ ಫೋನ್ ಮಾಡಿ ಹೇಳಿದ. ಹಿಂದಿನ ಗೆಳೆಯನ ಸುದ್ದಿಗಿಂತ ಈ ಗೆಳೆಯನ ಸುದ್ದಿ ತನಗೆ ಖುಷಿ ಕೊಟ್ಟಿತು. ಪಂಚಾಯ್ತಿ ಸದಸ್ಯೆಯಾಗಿ ಆಕೆ ಆಯ್ಕೆಯಾಗಿದ್ದಳು. ನಾಲ್ಕೈದು ಸಲ ಆರಿಸಿ ಬಂದಿದ್ದ ಪ್ರತಿಷ್ಠಿತ ವ್ಯಕ್ತಿಯನ್ನೇ ಸುಶೀಲಾ ಸೋಲಿಸಿದ್ದಳು. ಊರಲ್ಲಿ ಎಲ್ಲರ ಬಾಯಲ್ಲಿ ಅವಳ ಮಾತೇ. ಜಂಬೂರಿಗೆ ಹೋದಾಗ ಆಕೆಯನ್ನು ಅವಶ್ಯ ಭೆಟ್ಟಿಯಾಗಲೇಬೇಕು ಎಂದು ಇವನು ಅಂದುಕೊಳ್ಳುತ್ತಿದ್ದ. ಆದರೆ ಊರಿಗೆ ಬಂದಾಗ ವಿಪರೀತ ಕೆಲಸ. ಅವ್ವನ ದವಾಖಾನೆ, ಸೋದರಮಾವನ ಬ್ಯಾಂಕ್ ಸಾಲ. ತಮ್ಮ ತಂಗಿಯರ ಮದುವೆ, ಅದು ಇದು ಎಂದು ಸಮಯವೇ ಸಾಲುತ್ತಿರಲಿಲ್ಲ. ಅಲ್ಲದೆ ಹೋಟೆಲ್ ಕಡೆ ಹೋಗುವ ಪ್ರಮೇಯವೇ ಬರಲಿಲ್ಲ. ಅವಳು ಅಧಿಕಾರದಲ್ಲಿದ್ದಾಗ ಅವಳನ್ನು ಭೆಟ್ಟಿಯಾಗಿ ಅಭಿನಂದಿಸಬೇಕೆಂದಿದ್ದ ಮಾತುಗಳು ಅವನಲ್ಲಿಯೇ ಉಳಿದಿದ್ದವು. ಅದರ ಬಗ್ಗೆ ನಾಗರಾಜನಿಗೆ ಬೇಸರ ಇತ್ತು. ಊರಿನ ನೆನಪಾಗಿ, ಹಿಂದಿನ ದಿನಗಳ ಚೆಲುಮೆಯಾಗಿ ಆಕೆ ಅವನಲ್ಲಿ ಉಳಿದುಕೊಂಡಿದ್ದಳು.

ಅಂತೂ ಒಮ್ಮೆ ಅವಳಲ್ಲಿಗೆ ಹೋಗುವುದು ಬಂದೇ ಬಿಟ್ಟಿತು. ಆಗ ಹೆಂಡತಿ ದೀಪಾ ಕೂಡ